ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 63.

ಮೃತಪಟ್ಟ ಎ. ಬಿ. ನರಸಿಹ್ಮಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕುಂಚಿಗರ ಪ್ಯಾಟೆಲಿರುವ ವಿ. ಎಸ್. ಕೇಶವಾಚಾರ್ರು, ಮೃತಪಟ್ಟ ಸದರೀ ಎ. ಬಿ. ನರಸಿಹ್ಮಯ್ಯಂಗಾರ್ರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಎ. ಬಿ. ನರಸಿಹ್ಮಯ್ಯಂಗಾರ್ರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೆ ಇಸವಿ 7ನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವಿ. ಎಸ್. ಕೇಶವಾಚಾರ್ರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಸೆಪಟಿಂಬರು ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎ. ಬಿ. ನರಸಿಹ್ಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ಆಗಸ್ಟು ತಿಂಗಳು 18ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ವಿ॥ ಅರ್ಜೀ ನಂಬರು 44.

ಮೃತಪಟ್ಟ ಹೊನ್ನಾಳಿಯಲ್ಲಿದ್ದ ಸವುದಾಫರ ಜಿಗರೇಖಾ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಸವುದಾಫರ ಖಾದ್ರಖಾ ಈತನ ತಮ್ಮ ಮಾಸುಂಖಾ ಮೈನರ್ ಬಿ॥ ಸವುದಾಫರ ಜಿಗರೇಖಾ, ಗಾರ್ಡಿಯರ್ ಸವುದಾಫರ ಅಪರಂಜೀ ರಸೂಲ್‌ಖಾ ವಲ್ಲದ ಬುಡ್ನಾಖಾ ಹೊನ್ನಾಳಿ ವಾಸಸ್ಥರು, ಮೃತಪಟ್ಟ ಸದರೀ ಸವುದಾಫರ ಜಿಗರೇಖಾ ಇವರಿಗೆ 1—2ನೆ ಯವರು ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊನ್ನಾಳಿ ಸ್ಥಳದ 1ನೆ ಸವುದಾಫರ ಖಾದರಖಾ, 2ನೆ ಮಾಸುಂಖಾ, ಮೈನರ್, ಗಾ॥ ಸೋದರಮಾವ ಅಪರಂಜೀ ರಸೂಲ್‌ಖಾ, ಹೊನ್ನಾಳಿ ವಾಸಸ್ಥರಾಗಿ ಮೃತಪಟ್ಟ ಜಿಗರೇಖಾ ಎಂಬವರ ಜಿಂದಗಿ ಬಗ್ಯಾಗಿ ಬರತಕ್ಕ 93—15—6 ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸವುದಾಫರ ಖಾದರಖಾ, 2ನೆ ಡಿಟೋ ಮಾಸುಂಖಾ, ಮೈನರ್, ಗಾ॥ ಸೋದರಮಾವನಾದ ಅಪರಂಜೀ ರಸೂಲ್‌ಖಾ ವಲ್ಲದ ಬುಡ್ನಾಸಾಬಿ ಎಂಬವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಿಗರೇಖಾರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ಆಗಸ್ಟ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೩—೧೯೦೪ನೆ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಹೊನ್ನಾಳಿ ವಾಸಸ್ಥರಾದ ಅಪರಂಜೀ ಖಲಂದರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹೊನ್ನಾಳಿವಾಸಿಯಾದ ಅಪರಂಜೀ ಬುಡ್ಣಾಸಾಬರ ಮಗ ರಸೂಲ್‌ಖಾ ಎಂಬವರು, ಮೃತಪಟ್ಟ ಸದರೀ ಅಪರಂಜೀ ಖಲಂದರಖಾಯವರಿಗೆ ಅಣ್ಣನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊನ್ನಾಳಿ ಸ್ಥಳದ ಅಪರಂಜೀ ರಸೂಲ್‌ಖಾ ಎಂಬವರು ಮೃತಪಟ್ಟ ಅಪರಂಜೀ ಖಲಂದರಖಾ ಎಂಬವರ ಜಿಂದಗಿ ಬಗ್ಯಾಗಿ ಬರತಕ್ಕ 25—14—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರಿ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಸೂಲ್‌ಖಾ ಎಂಬವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಖಲಂದರಖಾ ಎಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೆ ಇಸವಿ ಆಗಸ್ಟ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.

ನೋಟಿಸ್.

ನಂಜನಗೂಡು ಮುನ್‌ಸಿಫ್ ಕೋರ್ಟಿನಲ್ಲಿ.

ಬ ತಾರೀಖು 18ನೆ ಆಗಸ್ಟ್ ೧೯೦೩ನೆ ಇಸವಿ.

1902—03ನೆ ಇಸವಿ ಶಿವಲ್ ನಂಬರು 114.

ವಾದಿ.	ಪ್ರತಿವಾದಿ.
ಎಳಂದೂರು ತಾಲ್ಲೂಕು ಜೋಡೀ ಗುಂಭಳ್ಳಿಯಲ್ಲಿರುವ ಆ ಗ್ರಾಮದ ಏಜಂಟ್ ನರಸಿಹ್ಮ ಉಪಾಧ್ಯರು.	ಯಳಂದೂರು ತಾಲ್ಲೂಕು ಗುಂಭಳ್ಳಿಯಲ್ಲಿರುವ ವೀರತ್ತಗೌಡನ ಪುಟ್ಟವಾದೇಗೌಡ.

ಇದರಿಂದ ಜೋಡೀ ಗುಂಭಳ್ಳಿ ಗ್ರಾಮದ ಜೋಡೀದಾರರಾದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಪ್ರತಿವಾದಿ ಪುಟ್ಟವಾದೇಗೌಡ ಜೋಡೀ ಗುಂಭಳ್ಳಿ ಗ್ರಾಮಕ್ಕೆ ಕೀರಿದ 167ನೆ ನಂಬರು ಪ್ರದೇಶದಲ್ಲಿ ಪ್ರತಿವಾದಿಯು ಸಾವಮಾನಿಗೆ ಉಪಯೋಗವಾ

ಗತಕ್ಕ ನಾಲ್ಕುಗಾಡೀ ಕಗ್ಗಲೀ ಮರಗಳನ್ನು 21—10—1901ರಲ್ಲಿ ಅಕ್ರಮವಾಗಿ ಕತರಾಯಿಸಿ 5—11—1901ರಲ್ಲು ಅವು ಗಳನ್ನು ಸಾಗಿಸಿಕೊಂಡು ಹೋಗಿ ಇಧಾನೆಂತಲೂ—ಇದಕ್ಕಾಗಿ ಡ್ಯಾಮೇಜು (20) ರೂಪಾಯಿಗಳೂ ಖರ್ಚೂ ಸಹಾ ಬರಬೇಕೆಂತ ಲೂ—ಮೇಲ್ಕಂಡ ಏಜಂಟ್ ನರಸಿಹ್ಮೋಪಾಧ್ಯಾಯರು ದಾವಾ ಮಾಡಿಧಾರೆ. ಸದರೀ ಜೋಡಿ ಗುಂಭ್ಳಿ ಗ್ರಾಮಕ್ಕೆ ಇನಾಂದಾರರಾಗಿ ಹಕ್ಕು ಬಾಧ್ಯತೆ ಇರತಕ್ಕ ಸಮಸ್ತರೂ 1903ನೆ ಇಸವಿ ಅಕ್ಟೋಬರು 12ನೆ ತಾರೀಖು ಧಿವಿ 11 ಘಂಟೆಗೆ ಈ ಕೋರ್ಟು ರೂಬರೂಬ್ ಹಾಜರಾಗಿ ಈ ಮೊಕದ್ದಮಾಕ್ಕೆ ಕಕ್ಷಿಗಾರರಾಗಿ ಕೇರಬಹುದು.

ಕೆ. ಲಕ್ಷ್ಮೀನಾರಣಯ್ಯ,
ಮುನ್ಸೀಫ್.

ಮೈಸೂರು ಸಿಟಿ ಮ್ಯುನಿಸಿಪ್ಯಾಲಿಟಿ.

ತಾರೀಖು 20ನೆ ಮಾಹೆ ಆಗಸ್ಟು 1903ನೆ ಇಸವಿ.

ಎಲೆಕ್ಷ್ಯನಲ್ಲಿ ಮ್ಯುನಿಸಿಪಲ್ ಕಮಿಷನರುಗಳನ್ನು ಚುನಾಯಿಸಲು ಅರ್ಹತೆವುಳ್ಳ ದೊಡ್ಡ ಮನುಷ್ಯರುಗಳ ಲಿಸ್ಟು.

ನಂಬರು.	ಹೆಸರು.	ಡೋರ್ ನಂಬರು.	ವಾಸಸ್ಥಳ.
	ಕಿಲ್ಲೆ ಮೊಹಲ್ಲಾ.		
1	ಮ॥ ಶ್ರೀ॥ ಲಕ್ಷ್ಮೀನಾರಣಪ್ಪನವರು ..	425	ತ್ರಿಯೋಶ್ವರಸ್ವಾಮಿ ದೇವಸ್ಥಾನದ ಬೀದಿ
	ನಜರುಬಾದು ಮೊಹಲ್ಲಾ.		
1	ಮ॥ ಶ್ರೀ॥ ಕೆ. ರಾಮಕೃಷ್ಣಯ್ಯನವರು ...	739	ಇಟ್ಟಿಗೆಗೂಡು
	ಲಷ್ಕರು ಮೊಹಲ್ಲಾ.		
1	ಮ॥ ಶ್ರೀ॥ ಎಂ. ಕೃಷ್ಣರಾಯರು, ಬಿ. ಎ. ...	18	ದೊಡ್ಡ ಬೀದಿ
2	,, ಬಿ. ವಿ. ಕೃಷ್ಣಮೂರ್ತಿ ರಾಯರು, ಬಿ. ಎ. & ಬಿ. ಎಲ್. ..	2890	ಹಳ್ಳದ ಕೇರಿ
	ಮುಂಡಿ ಮೊಹಲ್ಲಾ.		
1	ಮ॥ ಶ್ರೀ॥ ಬಿ. ಶ್ರೀನಿವಾಸಯ್ಯಂಗಾರ್ಯರು, ಬಿ. ಎ. & ಬಿ. ಎಲ್. ...	290	ಕಾಳಿಮ್ಮನ ಗುಡಿ ಬೀದಿ
	ದೇವರಾಜ ಮೊಹಲ್ಲಾ.		
1	ಮ॥ ಶ್ರೀ॥ ಎಂ. ಎಚ್. ರಂಗಯ್ಯಂಗಾರ್ಯರು	1665	ಕೃಷ್ಣವಿಳಾಸ ಅಗ್ರಹಾರ
2	,, ಎಂ. ಎಸ್. ಸುಬ್ರಹ್ಮಣ್ಯಯ್ಯರು, ಬಿ. ಎ.	425	ಇಲವಾಲದ ರಸ್ತೆ
3	,, ಎಂ. ನರಸಪ್ಪಯ್ಯನವರು, ಬಿ. ಎ. & ಬಿ. ಎಲ್. ..	1942	ಸಂತೇಪೇಟೆ
4	,, ಎಸ್. ಕೃಷ್ಣರಾಯರು, ಬಿ. ಎ. ...	..	ಲಕ್ಷ್ಮೀವಿಳಾಸ ಅಗ್ರಹಾರ
5	,, ಬಿ. ವೆಂಕೋಬರಾಯರು ...	1411	ಭೀಮೈಯ್ಯನ ಗಲ್ಲೆ
	ಚಾಮರಾಜ ಮೊಹಲ್ಲಾ.		
1	ಮ॥ ಶ್ರೀ॥ ಬಿ. ರಂಗಯ್ಯಂಗಾರ್ಯರು, ಬಿ. ಎ. & ಬಿ. ಎಲ್. ...	327	ವೈಸ್ರಾಯಿ ರಸ್ತೆ
	ಕೃಷ್ಣರಾಜ ಮೊಹಲ್ಲಾ.		
1	ಮ॥ ಶ್ರೀ॥ ಸಿ. ನರಸಿಂಹಯ್ಯನವರು, ಬಿ. ಎ. & ಬಿ. ಎಲ್. ...	262	ರಮಾವಿಳಾಸ ಅಗ್ರಹಾರ

ತಾರೀಖು 20ನೆ ಮಾಹೆ ಆಗಸ್ಟು 1903.

ಎಲೆಕ್ಷ್ಯನಲ್ಲಿ ಮ್ಯುನಿಸಿಪಲ್ ಕಮಿಷನರು ಆಗಲು ಅರ್ಹತೆವುಳ್ಳ ದೊಡ್ಡ ಮನುಷ್ಯರುಗಳ ಲಿಸ್ಟು.

ನಂಬರು.	ಹೆಸರು.	ಡೋರು ನಂಬರು.	ವಾಸಸ್ಥಳ.
	ದೇವರಾಜ ಮೊಹಲ್ಲಾ.		
1	ಮ॥ ಶ್ರೀ॥ ಎಂ. ಎಚ್. ರಂಗಯ್ಯಂಗಾರ್ಯರು	1665	ಕೃಷ್ಣವಿಳಾಸ ಅಗ್ರಹಾರ

ಕೆ. ಶ್ರೀನಿವಾಸರಾವ್,
ಫಾರ್ ಪ್ರೆಸಿಡೆಂಟ್.